# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ.286/2018

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಗೌಡಪ್ಪ ಬಿರಾದಾರ | ಸಿಡಬ್ಲ್ಯೂ-14 | ಪಿಡಬ್ಲ್ಯೂ-10 |
| ತಂದೆಯ/ಗಂಡನ ಹೆಸರು | ಕಲ್ಲನಗೌಡ ಬಿರಾದಾರ | | |
| ವಯಸ್ಸು | 58 ವರ್ಷ | | |
| ಉದ್ಯೋಗ | DRDO ಬಸವಕಲ್ಯಾಣ | | |
| ವಾಸ ಸ್ಥಳ | ಬಸವಕಲ್ಯಾಣ | | |

ದಿನಾಂಕ 04-01-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2007 ರಿಂದ 2018 ರವರೆಗೆ ಕಲಬುರಗಿಯಲ್ಲಿ ಹಿರಿಯ ಮೋಟಾರು ವಾಹನ ನಿರೀಕ್ಷಕನಾಗಿ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ದಿನಾಂಕ 27.03.2018 ರಂದು ಸಿಪಿಐ ಸೇಡಂ ಇವರಿಂದ ಅಪಘಾತದ ಹಿನ್ನಲೆಯಲ್ಲಿ ತಡೆಹಿಡಿಯಲಾದ ವಾಹನಗಳ ಯಾಂತ್ರಿಕ ಪರೀಕ್ಷೆ ಮಾಡಿಕೊಡುವ ಕುರಿತು ವಿಜ್ಞಾಪನಾ ವರದಿ ಬಂದಿದ್ದು ಆಗ ದಿನಾಂಕ 27.03.2018 ರಂದು ಬೆಳಗ್ಗೆ 10.30 ಗಂಟೆಗೆ ಸೇಡಂ ಪೊಲೀಸ ಠಾಣಾ ಆವರಣಕ್ಕೆ ಭೇಟಿ ಕೊಟ್ಟು ಬಜಾಜ ಪಲ್ಸರ 150 ಸಿಸಿ ವಾಹನ ನಂ.ಕೆಎ-32 ಇಕೆ-0307 ನೇದ್ದನ್ನು ಪರೀಕ್ಷೆ ಮಾಡಲಾಗಿ ಈ ಕೆಳಕಂಡ ಜಖಂಗಳು ಕಂಡುಬಂದಿರುತ್ತವೆ.

1. ಮುಂದಿನ ಹೆಡ್ ಲೈಟ್ ಜಖಂಗೊಂಡಿತ್ತು.
2. ಹೆಡ್ ಲೈಟ ಕವರ ಜಖಂಗೊಂಡಿತ್ತು.

ಸದರಿ ವಾಹನವನ್ನು ರಸ್ತೆಯ ಮೇಲೆ ಚಲಾಯಿಸಿ ನೋಡಿದ್ದು ಅದರ ಬ್ರೆಕ್ ಸಿಸ್ಟಮ ಸೂಸ್ಥಿತಿಯಲ್ಲಿ ಇತ್ತು. ನನ್ನ ಅಭಿಪ್ರಾಯದಂತೆ ರಸ್ತೆ ಅಪಘಾತವು ಸದರಿ ವಾಹನ ಯಾಂತ್ರಿಕ ತೊಂದರೆಯಿಂದ ಆಗಿಲ್ಲ. ಈ  ಕುರಿತು ತನಿಖಾಧಿಕಾರಿಯವರಿಗೆ ವರದಿಯನ್ನು ನೀಡಿರುತ್ತೇನೆ. ವರದಿಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಆ ದಿವಸ ಪರೀಕ್ಷೆ ಮಾಡಿದ ವಾಹನವನ್ನು ಈಗ ನೋಡಿದ್ದಲ್ಲಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಎ. ಎಸ್. ಕೆ. ಆರೋಪಿ ಪರ ವಕೀಲರಿಂದ**

ನಾನು ಸೇಡಂ ಠಾಣಾ ಆವರಣಕ್ಕೆ ಭೇಟಿ ಕೊಟ್ಟಿರುವುದಾಗಿ, ವಾಹನ ಪರೀಕ್ಷೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರಿಗೆ

ಅನುಕೂವಾಗುವಂತೆ ನಿಪಿ-11 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

**SYH*